ವಾಪಸಾಗುವಾಗ, ಅಲ್ಲಿ ನೂರಾರು ಮಂದಿಯ ದೊಂಬಿಯೇ ಉಂಟಾಗಿತ್ತು. ಆರ್ಥರ್ ಡೇವಿಡ್ ಹ್ಯೂಸ್‌ನ ಸಾವು ಫಾರ್ಮಿನಾಚೆಯ ಕಟು ಲೌಕಿಕದ ಮಂದಿಯ ಕಿವಿಗೆ ಹೇಗೆ ಸೋರಿತ್ತೋ ಏನೋ, ಬಹುಶಃ ಬೆಳಬೆಳಗ್ಗೆ ಶರಣಪ್ಪನೊಡನೆ ಬಾವಿಯಿಂದ ಹೆಣವೆತ್ತಬಂದ ಪಕ್ಕದ ತೋಟದ ಮಂದಿಯಿಂದಲೇನೋ ಅಲ್ಲಿ ನೆರೆದಿದ್ದ ಅಗಣಿತ ಜನದ ನೂರೆಂಟು ಎಣಿಕೆಗುಣಿಕೆಗಳಾಗುತ್ತಿದ್ದವು. ಇಂತಹ ಸಂದಣಿಯ ನಡುವೆ ಇಬ್ಬರು ಪಾದ್ರಿಗಳು ಬಲು ಮುತುವರ್ಜಿ ತಾಳಿ, ಹ್ಯೂಸ್‌ನ  ಮರಣೋತ್ತರದ ಉಸಾಬರಿಯನ್ನು ತಾವೇ ವಹಿಸಿಕೊಂಡಿದ್ದರು. ರುದ್ರನೀಲ ಥಾಪಸೆ, ತಾನು ಕಾರಲ್ಲಿಯೇ ಉಳಿವುದಾಗಿ ಹೇಳಿ, ಹೆಂಡತಿಗೇ ಸನ್ನಿವೇಶ ನಿಭಾಯಿಸಲಿಕ್ಕೆ ಹೇಳಿದ. ಶರಣಪ್ಪ, ಆ ದೊಂಬಿಯ ನಡುವಿನಿಂದ, ಇದ್ದಕ್ಕಿದ್ದಂತೆ ತೂರಿ ಹೊರಬಂದು, ಕಾರಿನ ಬಳಿಸಾರಿ 'ರೇಣು ಮೇಡಂ... ಇನ್ನು ಹೆಣ ಕೂಡ ನನ್ನ ಕೈ ತಪ್ಪಿದ ಹಾಗೇ... ಈ ತೋಟದ ಹಿಂಬದಿಯಲ್ಲಿರೋ ಬಂಡೆ ಮತ್ತು ಬಾವಿಯಾಚೆಗೆ ನೆಲಮಂಗಲದ ಚರ್ಚಿನವರಿಗೆ ಸೇರಿದ ಜಮೀನಿದೆ... ಅಲ್ಲಿಯ ಪಾದ್ರಿಗಳು ಬಂದು, ಡೇವಿಡ್ ಸಾರ್ ತಮ್ಮ ಧರ್ಮಕ್ಕೆ ಸೇರಿದವರು... ತಾವೇ ಮಣ್ಣು ಮಾಡುತೀವಿ... ಅಂತ ಪಟ್ಟು ಹಿಡಿದಿದಾರೆ. ಅವರೆದುರು ನನ್ನ ಮಾತೆಲ್ಲಿ ನಡೀತದೆ... ಒಟ್ನಲ್ಲಿ ಈ ಎಲ್ಲಾ ಆಸ್ತಿ ಒಳಹಾಕ್ಕೊಳ್ಳೋ ಪಿತೂರಿ ಅಷ್ಟೆ... ಕೈಲಾದಷ್ಟು ನಿಯತ್ತಿನಿಂದ ನಾನೂ ಮಾಡೋ ಅಷ್ಟು ಮಾಡಿದೀನಿ... ಇನ್ನುಳಿದದ್ದು ಡೇವಿಡ್ ಸಾರ್ ನಂಬಿದ್ದ ಕೃಷ್ಣ ಮತ್ತು ಕ್ರಿಸ್ತ ಒಂದೇ ಅನ್ನೋ ಆ ದೇವರಿಗೆ ಬಿಟ್ಟಿದ್ದು...' ಎಂದು ಆಕಾಶದತ್ತ ಕೈಮುಗಿದು ಹೇಳಿದ. ಅವನ ಮೋರೆಯಲ್ಲಿದ್ದುದು ಹತಾಶೆಯೋ, ಸಂತಾಪವೋ ಇವರಿಬ್ಬರಿಗೂ ತಿಳಿಬರಲಿಲ್ಲ.

ರೇಣು, ಕೆಲಹೊತ್ತು ಏನನ್ನೋ ವಿಚಾರ ಮಾಡಿ 'ಶರಣಪ್ಪ... ನೀವು ಹೇಳಿದ್ದು ಸರಿ. ನೀವು ಮಾಡಬೇಕಾದ್ದು ನೀವು ಮಾಡಿದ್ದೀರಿ, ಹಾಗೇ, ನಾವು ಮಾಡಬೇಕಾದ್ದನ್ನು ನಾವು ಮಾಡಿದೀವಿ... ನಾವಿನ್ನು ಹೊರಡುತೀವಿ...' ಅಂತಂದು, ಕಾರಿಗೆ ವಾಪಸಾಗಿ, ಸ್ಟಿಯರಿಂಗು ಹಿಡಿದಳು. ಕಾರು ಮರಳಿ ನೈಸ್ರೋಡಿನ ಟೋಲ್‌ಗೇಟು ದಾಟುತ್ತಿರುವಾಗ, ರುದ್ರನೀಲ ಥಾಪಸೆಯ ಹಿಂಗೊರಳನ್ನು ಎಡಗೈಯಿಂದ ಬಳಸಿ, 'ಬಡಾನೀಲ್... ನನಗೆ ಗೊತ್ತು ನೀನು ತುಂಬಾ ಎಮೋಷನಲ್ ಆಗಿದ್ದೀ... ಅಳೋ ಹಾಗಿದ್ದರೆ ಅತ್ತುಬಿಡು...' ಎಂದು ಅವನ ಹಿಂದಲೆಯವರೆಗೂ ಕೈಯೇರಿಸಿ ಆನಿಸುತ್ತ ತಡವಿದಳು.

## ನಾಗರಾಜ ವಸ್ತಾರೆ

ಕವಿ, ಕತೆಗಾರ, ಪ್ರಬಂಧಕಾರ, ಆರ್ಕಿಟೆಕ್ಟ್ ನಾಗರಾಜ ವಸ್ತಾರೆ 'ಹಕೂನ ಮಟಾಟ', 'ನಿರವಯವ' ಎಂಬ ಕಥಾಸಂಕಲನಗಳನ್ನು, 'ಮಡಿಲು' ಎಂಬ ನೀಳ್ಗತೆಯನ್ನು ಪ್ರಕಟಿಸಿದ್ದಾರೆ. 'ಹಳೆಮನೆ ಕತೆ', 'ಬಯಲು ಆಲಯ' ಮತ್ತು 'ಪಟ್ಟಣ ಪುರಾಣ' ಅವರ ಅಂಕಣ ಬರಹಗಳ ಪುಸ್ತಕಗಳಾದರೆ, 'ವಸ್ತಾರೆ ಪದ್ಯಗಳು', 'ವಸ್ತಾರೆ ಇನ್ನೂ 75' ಅವರ ಕವಿತೆಗಳ ಸಂಗ್ರಹಗಳಾಗಿವೆ. ಬೆಂಗಳೂರಿನಲ್ಲಿ ನೆಲೆಸಿರುವ ವಸ್ತಾರೆ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರಯೋಗ ನಿರತರು. ಅವರ ಇತ್ತೀಚಿನ ಪುಸ್ತಕ – '360 ಡಿಗ್ರಿ ಗೂಗಲಿತ ವೃತ್ತಾಂತಗಳು'.